**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ**

**ಸಿಸಿ ನಂಃ 261/2025**

**ಪಿರ್ಯಾದಿ** : ಶ್ರೀ ಪುಟ್ಟಸ್ವಾಮಿ
ಬಿನ್ ಲೇಟ್ ಅಂಕೇಗೌಡ @ ಬಿಳಿಗೌಡ
ವಯಸ್ಸು 47 ವರುಷ,
ವಾಸ ಃ ನೆಲ್ಲೂರು ಗ್ರಾಮ, ಕಸಬಾ ಹೋಬಳಿ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

- ವಿರುದ್ದ -

**ಆರೋಪಿ** : ಶ್ರೀ ಡಿ.ಕೆ. ಮಹೇಶ್ @ ಗೂಳಿ ಮಹೇಶ್
ಬಿನ್ ಕರಿಯಪ್ಪ
ವಯಸ್ಸು: 40 ವರ್ಷ
ವಾಸ - ದೊಡ್ಡಅರಸಿನಕೆರೆ ಗ್ರಾಮ, ಸಿ.ಎ. ಕೆರೆ ಹೋಬಳಿ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

**ಆರೋಪಣೆ**

ಆರೋಪಿಯಾದ ನೀವು ಪಿರ್ಯಾದುದಾರರಿಗೆ ಪರಿಚಯಸ್ಥರಾಗಿದ್ದು, ಅದ್ದರಿಂದ ದಿನಾಂಕ 07.11.2013 ರಂದು ನಿಮ್ಮ ಕಾನೂನಿನ ಅವಶ್ಯಕತೆಗಾಗಿ ನೀವು ಪಿರ್ಯಾದುದಾರರಿಂದ 2 ಲಕ್ಷದ 50 ಸಾವಿರ ರೂಪಾಯಿಗಳನ್ನು ಸಾಲವಾಗಿ ಪಡೆದು, ಅದನ್ನು 2 ತಿಂಗಳ ಒಳಗಾಗಿ ಹಿಂದುರುಗಿಸುವುದಾಗಿ ಭರವಸೆ ನೀಡಿರುತ್ತೀರಿ. ಅದೇ ದಿನ ಮುಂದಿನ ದಿನಾಂಕವನ್ನು ನಮೂದಿಸಿದ ಅಂದರೆ ದಿನಾಂಕ 07.01.2014 ಎಂದು ನಮೂದಿಸಿ 612900 ನಂಬರಿನ ಕೆ.ಎಂ.ಎಫ್. ಡೈರಿ ಬ್ರಾಂಚ್ ನ ಗೆಜ್ಜಲಗೆರೆಯ ಎಂ.ಡಿ.ಸಿ.ಸಿ. ಬ್ಯಾಂಕ್ ನ ಚೆಕ್ಕನ್ನು 2 ಲಕ್ಷದ 50 ಸಾವಿರ ರೂಪಾಯಿ ಎಂದು ನಮೂದಿಸಿ ಪಿರ್ಯಾದುದಾರರಿಗೆ ನೀಡಿರುತ್ತೀರಿ, ಆರೋಪಿಯಾದ ನೀವು ಒಪ್ಪಿ ಕೊಂಡಂತೆ ನಿರ್ದಿಷ್ಟ ಅವದಿಯೊಳಗೆ ಸಾಲದ ಮೊತ್ತವನ್ನು ಹಿಂದುರುಗಿಸದೆ ಇದ್ದ ಕಾರಣ ಅವರು ನಿಮ್ಮನ್ನು ಬೇಟಿ ಮಾಡಿ ಸಾಲದ ಮೊತ್ತವನ್ನು ವಾಪಸ್ಸು ನೀಡುವಂತೆ ಕೇಳಿದಾಗ, ಆರೋಪಿಯಾದ ನೀವು ಚೆಕ್ಕನ್ನು ಹಾಜರುಪಡಿಸಿ ಹಣ ಪಡೆಯುವಂತೆ ಹೇಳಿರುತ್ತೀರಿ. ಅದರಂತೆ

ಪಿರ್ಯಾದುದಾರರು ಸದರಿ ಚೆಕ್ಕನ್ನು ತಳಗವಾದಿ ಬ್ರಾಂಚ್ ನ ಕೆನರಾ ಬ್ಯಾಂಕ್‌ಗೆ ಹಾಜರುಪಡಿಸಿದಾಗ, ಅರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿನಾಂಕ 20.01.2014 ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ದಿನಾಂಕ 25.01.2014 ರಂದು ಪಿರ್ಯಾದುದಾರರು ಆರೋಪಿಯಾದ ನಿಮಗೆ ತಿಳುವಳಿಕೆ ನೋಟೀಸನ್ನು ಕಳುಹಿಸಿದ್ದು ಅದನ್ನು ನೀವು ಸ್ವೀಕರಿಸಿರುತ್ತೀರಿ. ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಪಿರ್ಯಾದುದಾರರಿಗೆ ಚೆಕ್ಕನ್ನು ನೀಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಕಲಂ 138 ರ ಸ್ವಾಮಿತ್ಯ ವರ್ಗಾವಣೆ ಕಾಯ್ದೆಯಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ವಿರುದ್ಧ ಆಪಾದಿಸಿದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ?

**ಉತ್ತರಃ**

ಪ್ರಶ್ನೆ. 2. ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಬಯಸುತ್ತೀರಾ ?

**ಉತ್ತರಃ**

ಪ್ರಶ್ನೆ. 3. ಪ್ರಶ್ನಿತ ಚೆಕ್ಕು ನಿಮ್ಮ ಬ್ಯಾಂಕ್ ಖಾತೆಗೆ ಸಂಬಂದಿಸಿರುತ್ತದೆಯೇ ?

**ಉತ್ತರಃ**

ಪ್ರಶ್ನೆ. 4. ಪ್ರಶ್ನಿತ ಚೆಕ್ಕಿನಲ್ಲಿ ಇರುವ ಸಹಿ ನಿಮ್ಮದಾಗಿರುತ್ತದೆಯೇ ?

**ಉತ್ತರಃ**

ಪ್ರಶ್ನೆ. 5. ಪ್ರಶ್ನಿತ ಚೆಕ್ಕನ್ನು ನೀವು ಪಿರ್ಯಾದುದಾರರಿಗೆ ನೀಡಿರುತ್ತೀರಿ ?

**ಉತ್ತರಃ**

ಪ್ರಶ್ನೆ. 6. ಪ್ರಶ್ನಿತ ಚೆಕ್ಕನ್ನು ನೀಡುವ ಕಾಲಕ್ಕೆ ಪಿರ್ಯಾದುದಾರರಿಗೆ ಹಣ ನೀಡುವ ಬಾದ್ಯತೆಯನ್ನು ನೀವು ಹೊಂದಿರುತ್ತೀರಿ ?

**ಉತ್ತರಃ**

ಪ್ರಶ್ನೆ. 7. ನೀವು ನಿಮ್ಮ ಬಾದ್ಯತೆಯನ್ನು ಅಲ್ಲಗಳೆದರೆ ನಿಮ್ಮ ಪ್ರತಿರಕ್ಷೆ ಏನಾಗಿರುತ್ತದೆ ?

A) Security cheque only ?

B) Loan repaid already ?

C) Cheque altered/misused ?

D) Other (Specify) ?

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕ ಃ 23.12.2025

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**